1991ರಲ್ಲಿ 35.36 ಕೋಟಿ ಬಂದಿತ್ತು. ಈಗ ಅದೇ ಡಿಸೆಂಬರ್ 1992ಕ್ಕೆ 43.02 ಕೋಟಿ ರೂ.ಗಳು ಬಂದಿವೆ.

ಅದೇ ಪ್ರಕಾರ 92ನೇ ಡಿಸೆಂಬರ್‌ನಲ್ಲಿ 40.66 ಕೋಟಿ ಬಂದಿದ್ದರೆ 93ರ ಜನವರಿಯಲ್ಲಿ 49.40 ಕೋಟಿ ಅಂದರೆ 9 ಕೋಟಿ ಒಂದು ತಿಂಗಳಲ್ಲೇ ಬಂದಿದೆ. ಐಎಂಎಲ್ ಮತ್ತು ಬಿಎಫ್ ಎರಡರ ಇನ್‌ಕಂ ನವೆಂಬರ್ 91ರಲ್ಲಿ 30.69ಕೋಟಿ ಇದ್ದರೆ 92ನವೆಂಬರ್‌ನಲ್ಲಿ 36.44ಕೋಟಿ, ಡಿಸೆಂಬರ್‌ನ 91ರಲ್ಲಿ 3.81 ಕೋಟಿ ಆದರೆ ಡಿಸೆಂಬರ್ 92ರಲ್ಲಿ 5.48 ಕೋಟಿ ಸುಮಾರು 2 ಕೋಟಿ ಹೆಚ್ಚು ಬಂದಿದೆ. 92ನೇ ಜನವರಿಯಲ್ಲಿ 4.40 ಕೋಟಿಯಾದರೆ 93 ಜನವರಿಯಲ್ಲಿ 8.22 ಕೋಟಿ ಅಂದರೆ ಡಬಲ್ ಆಗಿದೆ. ಆದ್ದರಿಂದ ಇದೇನು ಸೂಚನೆ ಕೊಡುತ್ತದೆ ಅಂದರೆ ಸೆಕೆಂಡ್ಸ್‌ನ್ನು ನಿಲ್ಲಿಸಿದ್ದರಿಂದ ಒಂದಕ್ಕೆ ಎರಡು ಪಟ್ಟು ಆದಾಯ ಬಂದಿದೆ ಎನ್ನುವುದು ಎರಡು ಮೂರು ತಿಂಗಳಿಂದ ಸ್ಪಷ್ಟವಾಗಿ ಕಾಣುತ್ತದೆ.

ಶ್ರೀ ಶಿವಶೇಖರಪ್ಪ ಶಿರವಾಳ್:– ಈ ಬಗೆಯ ಕಟ್ಟುನಿಟ್ಟಿನ ಕ್ರಮ ತೆಗೆದು ಕೊಂಡ ನಂತರ ಒಂದು ಬಿಲ್ಲನ್ನು ಹಚ್ಚಿ ಆದರ ಮೂಲಕ ಎರಡು ಮೂರು ಕಡೆ ವ್ಯವಹಾರ ಮಾಡುವ ಸುದ್ದಿಯಿದೆ, ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವಾಟಾಳ್ ನಾಗರಾಜ್:– ಇದರ ವಿಚಾರ ಅವರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ ಪಾಪ. ಅದೇ ಸೆಕೆಂಡ್ಸ್.

ಶ್ರೀ ಎಂ. ವೀರಪ್ಪ ಮೊಯಿಲಿ:– ಸ್ಪಷ್ಟವಾಗಿ ಹೇಳುವುದಿದ್ದರೆ ಎರಡು ತಿಂಗಳಿಂದ ಡಿಸ್ಟಿಲರಿಯಿಂದ ಯಾವ ಸೆಕೆಂಡ್ಸೂ ಬರುವುದಿಲ್ಲ. ಹೊರಗೆ ಬಂದಿದ್ದರೆ ಎಲ್ಲೆಲ್ಲಿ ಸಿಗುತ್ತದೆ ಅಲ್ಲಿ ಹಿಡಿಯುತ್ತೇವೆ. ಡಿಸ್ಟಿಲರಿಯಿಂದ ಯಾವತ್ತೂ ಬರದ ಹಾಗೆ ನಾವು ಸಂಪೂರ್ಣ ನಿಲ್ಲಿಸುತ್ತೇವೆ. ಬಾಕಿ ಕಡೆ ಕೂಡ ಎಲ್ಲೆಲ್ಲಿ ಇದೆ ಸಾಕಷ್ಟು ನಾವು ರೈಡ್ ಮಾಡಿ ಹಿಡಿಸಿದ್ದೇವೆ. ಒಮ್ಮೆ ಒಂದು ಆಲೋಚನೆ ಇತ್ತು, ಅದು ನೈತಿಕವಾಗಿ ಒಳ್ಳೆಯದಲ್ಲ ಎಂದು ನಾನು ಕೈಬಿಟ್ಟೆ. ಇಲ್ಲದಿದ್ದರೆ ನನ್ನ ಆಲೋಚನೆ ಇತ್ತು, ಡಿಸ್ಟಿಲರಿಯಿಂದ ಹೊರಗೆ ಈಗಾಗಲೇ ಬಂದಿದ್ದು ಇದ್ದರೆ ಆ ಬಗ್ಗೆ ವಾಲಂಟರಿ ಡಿಸ್‌ಕ್ಲೋಸರ್ ಸ್ಕೀಮ್ ಮಾಡಿ ತನಿಖೆ ಮಾಡಿದರೆ ಸ್ವಲ್ಪ ಆದಾಯ ಬರಬಹುದು ಮತ್ತು ಸತ್ಯಸಂಗತಿ ತಿಳಿದ ಹಾಗೆ ಆಗುತ್ತದೆಂದು ಒಂದು ಅಂದಾಜು ಮಾಡಿದೆ. ಇದು ಒಂದು ಅನೈತಿಕ ಕಾರ್ಯಕ್ರಮ ಮಾಡಿದ ಹಾಗೆ ಆಗುತ್ತದೆ ನನಗೆ ಅನ್ನಿಸಿತ್ತು. ಆದರೆ ಇದಕ್ಕೆ ನಾನು ಪ್ರೋತ್ಸಾಹ ಕೊಡಬಾರದು ಎಂದು ಮಧ್ಯದಲ್ಲೇ ಕೈಬಿಟ್ಟೆ.

ಶ್ರೀ ಶಿವಶೇಖರಪ್ಪ ಶಿರವಾಳ್:– 92–93ರಲ್ಲಿ ಅಬ್ಕಾರಿಯಿಂದ ಎಷ್ಟು ಆದಾಯ ಬರಬಹುದು ?

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಉತ್ತರದಿಂದ ಒಂದು ಜಿಜ್ಞಾಸೆ ಉಂಟಾಗಿದೆ. ಇಲ್ಲಿಯವರೆಗೆ ಇವರು ಕೊಟ್ಟ ಅಂಕಿಗಳು ಮದ್ಯದ ಮಾರಾಟದಿಂದ ಬಂದ ಆದಾಯಕರವೆಂದು ಹೇಳಿದ್ದಾರೆ. ಇದು ಆದಾಯಕರವೇ ?

(ಉತ್ತರವಿಲ್ಲ)

ರಾಜ್ಯದಲ್ಲಿ ಕಲಾಮಂದಿರಗಳ ನಿರ್ಮಾಣದ ಸ್ಥಳಗಳು

92 (875) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):–

ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸರ್ಕಾರದ ವತಿಯಿಂದ ಕಲಾಮಂದಿರಗಳನ್ನು ನಿರ್ಮಿಸಲಾಗುತ್ತಿರುವ ಸ್ಥಳಗಳಾವುವು;

ಆ) ಈ ನಿರ್ಮಾಣ ಕಾರ್ಯಕ್ಕೆ ವಾರ್ಷಿಕವಾಗಿ ನಿಗಧಿಯಾಗಿರುವ ಹಣದ ಮೊತ್ತವೆಷ್ಟು;

ಇ) ಈವರೆಗೆ ಸರ್ಕಾರದ ವತಿಯಿಂದ ಮಾಸಾಶನವನ್ನು ಮಂಜೂರು ಮಾಡಲಾಗಿರುವ ಕಲಾವಿದರ ಸಂಖ್ಯೆ ಎಷ್ಟು;

ಈ) ಕಳೆದ ಎರಡು-ಮೂರು ವರ್ಷಗಳಿಂದ ಕಲಾವಿದರಿಗೆ ಮಾಸಾಶನವನ್ನು ಮಂಜೂರು ಮಾಡದಿರಲು ಕಾರಣವೇನು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):-

ಅ) ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಕೋಲಾರ, ಮಂಡ್ಯ, ಹಾಸನ, ಮಂಗಳೂರು ಚಿಕ್ಕಮಗಳೂರು, ಬೆಳಗಾಂ, ಬಿಜಾಪುರ, ಧಾರವಾಡ, ಕಾರವಾರ, ಗುಲ್ಬರ್ಗಾ, ಬಳ್ಳಾರಿ, ಬೀದರ್, ರಾಯಚೂರು.

ಆ) 1992-93ನೇ ಸಾಲಿನಲ್ಲಿ ರೂ. 24.17 ಲಕ್ಷ

ಇ) 3771

ಈ) ಕಳೆದ ಎರಡು - ಮೂರು ವರ್ಷಗಳಿಂದ ಆರ್ಥಿಕ ತೊಂದರೆಯಿಂದ ಹೊಸದಾಗಿ ಮಾಸಾಶನಗಳನ್ನು ಮಂಜೂರು ಮಾಡುತ್ತಿಲ್ಲ; ಆದಾಗ್ಯೂ ಈಗ ನೀಡುತ್ತಿರುವ ಫಲಾನುಭವಿಗಳಿಗೆ ಇದನ್ನು ಮುಂದುವರಿಸಲಾಗುತ್ತಿದೆ.

ಶ್ರೀ ಎಂ.ಎಸ್. ಆತ್ಮಾನಂದ:- ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಸುಮಾರು 16 ಜಿಲ್ಲೆಗಳಲ್ಲಿ ಕಲಾ ಮಂದಿರಗಳನ್ನು ನಿರ್ಮಾಣ ಮಾಡುತ್ತೇವೆ ಎಂದು ತಿಳಿಸಿದ್ದಾರೆ. ಅದು ಯಾವ ಹಂತದಲ್ಲಿದೆ ? ಮತ್ತು ಮಂಡ್ಯ ನಗರದಲ್ಲಿ ನಿರ್ಮಾಣವಾಗುತ್ತಿರುವ ಕಲಾಮಂದಿರಕ್ಕೆ ಸರ್ಕಾರದಿಂದ ಎಷ್ಟು ಅನುದಾನ ನಿಗದಿ ಮಾಡಲ್ಪಟ್ಟಿತ್ತು ? ಈವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್:- ಮಾನ್ಯ ಅಧ್ಯಕ್ಷರೇ, ವಿವಿಧ ಜಿಲ್ಲೆಗಳಲ್ಲಿ ಈ ರಂಗಮಂದಿರಗಳ ಕಟ್ಟಡದ ಕೆಲಸ ವಿವಿಧ ಹಂತದಲ್ಲಿದೆ. ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ಮುಗಿದಿದೆ. ಕೋಲಾರ ಮುಗಿದಿದೆ, ಪ್ರಾರಂಭ ಮಾಡಬೇಕು. ಕಾರವಾರದಲ್ಲಿ ಮುಗಿದಿದೆ, ಪ್ರಾರಂಭ ಮಾಡಬೇಕು. ಹೀಗೆ ಹಲವು ಹಂತಗಳಲ್ಲಿ ನಡೆಯುತ್ತಿದೆ. ಕೋಲಾರದಲ್ಲಿ ಸಧ್ಯದಲ್ಲಿಯೇ ಪ್ರಾರಂಭ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ:- ಮುಗಿದು ಎರಡು ವರ್ಷವಾಗಿದೆ. ಅದರ ಬೀಗವನ್ನು ತೆಗೆಸುವುದಕ್ಕೆ ಸರ್ಕಾರದ ಕೈಯಲ್ಲಿ ಆಗಿಲ್ಲ.

ಶ್ರೀ ಹೆಚ್. ವಿಶ್ವನಾಥ್:- ಮತ್ತೆ ಮಂಡ್ಯದಲ್ಲಿ ಅದರ ಮೂಲ ಅಂದಾಜು 17 ಲಕ್ಷ ರೂಪಾಯಿ. ಈಗ ಪರಿಷ್ಕೃತ ಅಂದಾಜು 38 ಲಕ್ಷ ರೂಪಾಯಿ ಆಗಿದೆ. ಮತ್ತೆ ಮುಗಿಸಲು ಬೇಕಾದಂಥ ಹಣ 24 ಲಕ್ಷ ರೂಪಾಯಿ ಬೇಕಾಗಿದೆ. ನಾವು ಸಾರ್ವಜನಿಕರಿಂದ ವಂತಿಕೆಯನ್ನು ಸಂಗ್ರಹ ಮಾಡಬೇಕಾಗಿತ್ತು. ಅದಕ್ಕೆ ನಿರ್ಬಂಧ ಇದ್ದುದರಿಂದ ಆ ಕೆಲಸ ಆಗಲಿಲ್ಲ. ಈಗ ಆ ನಿರ್ಬಂಧವನ್ನು ಸಡಿಲಿಸಲಾಗಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಕೂಡ ಈಗ ಮಾಡಲಾಗಿದೆ. ಒಂದು ವರ್ಷದಲ್ಲೇ ಅದನ್ನು ಸಂಪೂರ್ಣ ಮಾಡತಕ್ಕಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ:– ಕಳೆದ ಐದು ವರ್ಷಗಳಿಂದ ಕಲಾವಿದರಿಗೆ ಮಾಸಾಶನವನ್ನು ಕೊಡುತ್ತಿಲ್ಲ. ಈ ಮಾಸಾಶನವನ್ನು ಮಂಜೂರು ಮಾಡದಿರುವುದಕ್ಕೆ ಆರ್ಥಿಕ ಕೊರತೆ ಕಾರಣ ಎಂದು ಹೇಳಿದ್ದಾರೆ. ಈ ಒಂದು ಮಾಸಾಶನಕ್ಕೆ ಬಹಳಷ್ಟು ಜನರು ಬೇಡಿಕೆ ಸಲ್ಲಿಸಿ ಕಾಯುತ್ತಿದ್ದಾರೆ. ಇದರ ಬಗ್ಗೆ ಶೀಘ್ರವಾಗಿ ಏನಾದರೂ ಪ್ರಯತ್ನವನ್ನು ಮಾಡುತ್ತಾರೆಯೇ ಎನ್ನುವ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಹೆಚ್. ವಿಶ್ವನಾಥ್:– ಸುಮಾರು 87ನೇ ಇಸವಿಯಿಂದಲೂ ಕೂಡ ಈ ಕಲಾವಿದರಿಗೆ ಮಾಸಾಶನವನ್ನು ಕೊಡತಕ್ಕಂಥದ್ದನ್ನು ಸ್ಥಗಿತ ಮಾಡಲಾಗಿದೆ. ಹೊಸದಾಗಿ ಮಂಜೂರು ಮಾಡತಕ್ಕಂಥದ್ದನ್ನು ಸ್ಥಗಿತ ಮಾಡಲಾಗಿದೆ. ಆದರೆ 3771 ಜನ ಕಲಾವಿದರುಗಳಿಗೆ ಈಗಾಗಲೇ ಸರ್ಕಾರದವರು ಕೊಡುತ್ತಿದ್ದಾರೆ. ಅದನ್ನು ನಿಲ್ಲಿಸಿಲ್ಲ. ಸಾವಿರಾರು ಅರ್ಜಿಗಳು ಏನು ಇವೆ ಅವುಗಳನ್ನು ಇನ್ನೊಂದು ತಿಂಗಳಲ್ಲಿ ಅದನ್ನು ಪರಿಷ್ಕರಣೆ ಮಾಡಿ ಅಕಾಡೆಮಿಗಳ ಮೂಲಕ ಶೀಘ್ರವಾಗಿ ಕೊಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ರಾಜ್ಯಕ್ಕೆ ಬರುವ ಪ್ರವಾಸಿಗಳ ಸಂಖ್ಯೆ

94 (25) ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ):–

ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1992–93ನೇ ಸಾಲಿನಲ್ಲಿ ರಾಜ್ಯಕ್ಕೆ ಬಂದ ಪ್ರವಾಸಿಗರ ಸಂಖ್ಯೆ ಎಷ್ಟು;

ಆ) ದೇಶೀಯ ಮತ್ತು ವಿದೇಶಿಯ ಪ್ರವಾಸಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲು ಸರ್ಕಾರ ಹಮ್ಮಿಕೊಂಡಿರುವ ಹೊಸ ಕಾರ್ಯಕ್ರಮಗಳೇನು ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ) 1992–93ರ ಆಂಕಿ ಅಂಶಗಳು 31 ನೇ ಮಾರ್ಚಿ 93ರ ನಂತರ ತಿಳಿಯುತ್ತದೆ.

ಆ) 1. ಪ್ರವಾಸೋದ್ಯಮ ಯೋಜನೆಗಳನ್ನು ಖಾಸಗಿ ಉದ್ಯಮಿಗಳು ಕೈಗೊಳ್ಳಲು ಉತ್ತೇಜಿಸಲು ಅನೇಕ ರಿಯಾಯಿತಿ ಮತ್ತು ಉತ್ತೇಜನಗಳನ್ನೊಳಗೊಂಡ ಕರ್ನಾಟಕ ಪ್ರವಾಸೋದ್ಯಮ ನೀತಿ ಪ್ರಕಟಣೆ.

2. ಸಾಹಸ ಪ್ರವಾಸೋದ್ಯಮ ಅಭಿವೃದ್ಧಿ.

3. ರಾಷ್ಟ್ರೀಯ ಉತ್ಸವಗಳ ಆಚರಣೆ ಜೊತೆಗೆ ಜಿಲ್ಲಾವಾರು ಪ್ರವಾಸೋದ್ಯಮ ಉತ್ಸವ ಆಚರಣೆ.

4. ಪ್ರೇಕ್ಷಣೀಯ ಸ್ಮಾರಕಗಳ ಅಂದ ಹೆಚ್ಚಿಸಲು ಹೊನಲು ಬೆಳಕು ವ್ಯವಸ್ಥೆ.

5. ಬಣ್ಣದ ಕಿರುಹೊತ್ತಿಗೆ ಹಾಗೂ ವೀಡಿಯೋ ಫಿಲಂ ನಿರ್ಮಾಣ.

6. ಪ್ರೇಕ್ಷಣೀಯ ಸ್ಥಳಗಳಲ್ಲಿ ಮಾರ್ಗದರ್ಶಿ ಸೌಲಭ್ಯ ಒದಗಿಸಲು ಮಾರ್ಗದರ್ಶಿ ತರಬೇತಿ ನೀಡುವ ಕಾರ್ಯಕ್ರಮ.

7. ಯಾತ್ರೆ ಕೇಂದ್ರಗಳ ಅಭಿವೃದ್ಧಿ

ಶ್ರೀ ಕೆ. ಹರ್ಷಕುಮಾರ ಗೌಡ:– ಮಾನ್ಯ ಅಧ್ಯಕ್ಷರೇ ನಾನು ಕೇಳಿದ ಪ್ರಶ್ನೆಗೆ 1992–93ನೇ ಸಾಲಿನಲ್ಲಿ ರಾಜ್ಯದ ಪ್ರವಾಸಿಗರ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಅದು ಮಾರ್ಚಿ ನಂತರ ನೀಡುತ್ತೇವೆ ಎಂದು ಹೇಳಿ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಜೊತೆಗೆ ಕರ್ನಾಟಕ ರಾಜ್ಯಕ್ಕೆ ಬರುವಂಥ